**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್.ಸಿ. ನಂಃ 10004 / 2024**

**ಚಾಸಾ ಃ 21**

**ಪ್ರಾಸಾ ಃ 18**

| | | |
|---|---|---|
| **ಹೆಸರು** | ಃ | ಅಂಬಿಕಾ |
| ತಂದೆ **ಹೆಸರು** | ಃ | ರೇವಣಸಿದ್ದಪ್ಪ |
| **ವಯಸ್ಸು** | ಃ | **36** ವರ್ಷ |
| **ವೃತ್ತಿ** | ಃ | ಮಹಿಳಾ ಪೋಲಿಸ್ ಠಾಣೆ , ದೊಡ್ಡಬಳ್ಳಾಪುರ |
| **ವಾಸ** | ಃ | ದೊಡ್ಡಬಳ್ಳಾಪುರ |

**ಈ ದಿನ ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. 2017 ರಿಂದ 2023 ರವರೆಗೆ ದೊಡ್ಡಬಳ್ಳಾಪುರ ನಗರ ಠಾಣೆಯಲ್ಲಿ ಡಬ್ಲ್ಯು ಪಿ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 11.04.2023 ರಂದು ತನಿಖಾಧಿಕಾರಿ ನನಗೆ ಮೃತೆ ಜನಿಲಾ ಜೋಬಿರವರ ಮೇಲಿನ ಬಟ್ಟೆಗಳನ್ನು ವೈದ್ಯಾಧಿಕಾರಿಯಿಂದ ಸಂಗ್ರಹಿಸಿಕೊಂಡು ತಂದು ಹಾಜರುಪಡಿಸುವಂತೆ ಮೌಖಿಕವಾಗಿ ನಿರ್ದೇಶನ ನೀಡಿದ ಮೇರೆಗ ನಾನು ಅದೇ ದಿವಸ ದೊಡ್ಡಬಳ್ಳಾಪುರ ಮಣಿಪಾಲ್ ಆಸ್ಪತ್ರೆಗೆ ಭೇಟಿ ವೈದ್ಯಾಧಿಕಾರಿಗಳು ಸಂಗ್ರಹಿಸಿ ಇಟ್ಟಂತಹ ನ್ಯಾ . ಮುಂದೆ ಇರುವ ಮು ಮಾ 2 ಹಾಗೂ 3 ಗಳನ್ನು ತಂದು ತನಿಖಾಧಿಕಾರಿ ಮುಂದೆ ಠಾಣೆಯಲ್ಲಿ ಹಾಜರುಪಡಿಸಿದ ಮೇರೆಗೆ ಚಾಸಾ 21 ರಿಂದ 23 ರವರ ಸಮಕ್ಷಮ ಮುಂದಿನ ತನಿಖೆಗಾಗಿ ಅಮಾನತುಪಡಿಸಿಕೊಂಡು ನಿಪಿ 6 ರಂತೆ ವಿವರವಾದ ಮಹಜರ್ ಮಾಡಿರುತ್ತಾರೆ. ನಿಪಿ 6 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 6 ಸಿ ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>**

ತನಿಖಾಧಿಕಾರಿ ನನಗೆ ಲಿಖಿತವಾಗಿ ಆದೇಶ ಮಾಡಿರಲಿಲ್ಲ. ಅದೇ ರೀತಿ ವೈದ್ಯಾಧಿಕಾರಿಗಳು ನನಗೆ ಯಾವುದೇ ಪತ್ರ ಕೊಟ್ಟಿರಲಿಲ್ಲ. ಅದೇ ರೀತಿ ನಾನು ವೈದ್ಯಾಧಿಕಾರಿಗಳು ಯಾವುದೇ ದಾಖಲೆ ಕೊಟ್ಟು ಬಂದಿರಲಿಲ್ಲ. ಸದರಿ ಬಟ್ಟೆಗಳು ಮೃತೆಗೆ ಸಂಬಧಪಟ್ಟಿದ್ದು ಎಂಬುದಕ್ಕೆ ಬೇರೆ ಯಾವುದೇ ದಾಖಲೆಗಳು ಇಲ್ಲ. ಸದರಿ ದಿನಾಂಕದಂದು ಆಸ್ಪತ್ರೆಗೆ ಬೆಳಿಗ್ಗೆ 11-30 ಕ್ಕೆ ಭೇಟಿ ನೀಡಿದ್ದೆ. ನನ್ನೊಂದಿಗೆ ಬೇರೆ ಯಾರು ಇದ್ದರೆಂದು ಜ್ಞಾಪಕ ಇಲ್ಲ. ನನ್ನೊಂದಿಗೆ ಇಬ್ಬರು ಆಸ್ಪತ್ರೆಗೆ ಹೋಗಿದ್ದೆವು. ಒಬ್ಬ ಪೋಲಿಸ್ ಮುನಿರಾಜು ಇದ್ದರು. ನಾನು ಆಸ್ಪತ್ರೆಗೆ ಹೋಗಿದ್ದಾಗ ಆರೋಪಿ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಠಾಣೆಯಲ್ಲಿ ಇದ್ದರು. ಠಾಣೆಯಲ್ಲಿ ಯಾವ ಗಂಟೆಯಲ್ಲಿ ಆರೋಪಿ ಇದ್ದನು ಎಂದು ಹೇಳಲಾಗುವುದಿಲ್ಲ. ನಾನು ಆಸ್ಪತ್ರೆಗೆ ಹೋಗುವಾಗಲೇ ಆರೋಪಿ ಠಾಣೆಯಲ್ಲಿ ಇದ್ದರೆ ಎಂದರೆ ಆರೋಪಿ ಹೆಂಡತಿಯೊಂದಿಗೆ ಆಸ್ಪತ್ರೆಯಲ್ಲಿ ಇದ್ದರು. ನಂತರ ಅವರನ್ನು ದಸ್ತಗಿರಿ ಮಾಡಿ ತರಲಾಯಿತು. ದಸ್ತಗಿರಿ ಯಾವ ಸಮಯದಲ್ಲಿ ಆಗಿತ್ತು ಎಂದರೆ ಗೊತ್ತಿಲ್ಲ. ದಸ್ತಗಿರಿ ಯಾರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ದಸ್ತಗಿರಿ ಮಾಡಲಾಗಿತ್ತು ಎಂದರೆ ಗೊತ್ತಿಲ್ಲ. ದಿನಾಂಕ 12.04.2023 ರಂದು ನನ್ನನ್ನು ಶವ ಕಾಯಲು ನೇಮಕ ಮಾಡಿದ್ದರು. ಸಮಯ ಗೊತ್ತಿಲ್ಲ.

ಮರುವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ